ಇಂದು ದಿ**: 18.09.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು **1** ರಿಂದ **3** ನೇ ಪ್ರತಿವಾದಿಗಳ ಪರಃ ಶ್ರೀ ಬಿ ಎಸ್ ಆರ್ ವಕೀಲರಿಂದ **.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನಗೆ 57 ವರ್ಷ ವಯಸ್ಸು. ನನಗೆ ಓದಲು ಬರೆಯಲು ಬರುತ್ತದೆ. ನಮ್ಮ ಅಜ್ಜ ಗಿರಿಯಪ್ಪನಿಗೆ 5 ಜನ ಮಕ್ಕಳು. ಅವರು ಸಣ್ಣಗಿರಿಯಪ್ಪ, ಗೋವಿಂದಪ್ಪ, ಮೂಡ್ಲಪ್ಪ, ತಿಮ್ಮಪ್ಪ ಮತ್ತು ಹಟ್ಟಿ ತಿಮ್ಮಪ್ಪ. ದಾವಾ ಆಸ್ತಿ ಸರ್ವೇ ನಂ. 324/1 ವಿಸ್ತೀರ್ಣ 9 ಎಕರೆ 23 ಗುಂಟೆ, ಸರ್ವೇ ನಂ. 323/1 ಬಿ ವಿಸ್ತಿರ್ಣ 34 ಗುಂಟೆ, ಸರ್ವೇ ನಂ. 323/7 ವಿಸ್ತೀರ್ಣ 1 ಎಕರೆ 37 ಗುಂಟೆ, ಸರ್ವೇ ನಂ. 323/2 ವಿಸ್ತೀರ್ಣ 2 ಎಕರೆ 36 ಗುಂಟೆ, ಸರ್ವೇ ನಂ. 323/8 ವಿಸ್ತೀರ್ಣ 1 ಎಕರೆ 26 ಗುಂಟೆ ಇರುತ್ತವೆ. ಜಾನಕಲ್ ಗ್ರಾಮದ ಸರ್ವೇ ನಂ. 384/4 ವಿಸ್ತೀರ್ಣ 20 ಗುಂಟೆ ನನಗೆ ಸೇರಿದ ಜಮೀನು ಎನ್ನುವುದು ನಿಜ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿ ಸ್ವಂತಕ್ಕೆ ನಾನು ಖರೀದಿಸಿದ ಜಮೀನು ಎಂದು ಹೇಳುತ್ತಾರೆ. ದಾವಾ 1 ರಿಂದ 3 ಮತ್ತು 5 ನೇ ಸ್ವತ್ತುಗಳನ್ನು ನಮ್ಮ ಅಜ್ಜ ಗಿರಿಯಪ್ಪ ಇದ್ದಾಗ ನಾವೆಲ್ಲರು ಮೌಖಿಕವಾಗಿ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾಲು ವಿಭಾಗದಂತೆ ನಾವು ನಮ್ಮ ಹಿಸ್ಸೆಯನ್ನು ಅನುಭವಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ವಾದಿಗಳು ಹಾಗೂ 4 ರಿಂದ 15 ಪ್ರತಿವಾದಿಗಳು ಒಟ್ಟು ಕುಟುಂಬದಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಸರಿಯಲ್ಲ.

ದಾವಾ 4 ನೇ ಆಸ್ತಿಯನ್ನು 1 ರಿಂದ 3 ನೇ ಪ್ರತಿವಾದಿಗಳ ತಂದೆ ಸಣ್ಣಗಿರಿಯಪ್ಪ ದಿಃ 16.04.1955 ರಲ್ಲಿ ಖರೀದಿ ಮಾಡಿರುತ್ತಾನೆ ಎನ್ನುವುದು ಗೊತ್ತಿರುವುದಿಲ್ಲ. ನಮ್ಮ ಅಜ್ಜ ಗಿರಿಯಪ್ಪ ಮೌಖಿಕವಾಗಿ ಪಾಲು ವಿಭಾಗ ಮಾಡಿ ಕೊಟ್ಟಿರುವ ವಿಷಯ ಗೊತ್ತಿಲ್ಲದೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿಯ ಸ್ವಾಧೀನತೆಯಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಇರುತ್ತಾರೆ ಎಂದರೆ ಸಾಕ್ಷಿ ಎಲ್ಲಾ ದಾವಾ ಆಸ್ತಿಗಳ ಸ್ವಾಧೀನತೆಯಲ್ಲಿ ಅವರೇ ಇರುತ್ತಾರೆ ಎಂದು ಹೇಳುತ್ತಾರೆ. ದಾವಾ 4 ನೇ ಆಸ್ತಿಯಲ್ಲಿ 1 ರಿಂದ 3 ನೇ ಪ್ರತಿವಾದಿಗಳು ಕೊಳವೆ ಬಾವಿಯನ್ನು ಹಾಕಿಸಿ ಅಡಿಕೆ

ಬೆಳೆಸಿರುತ್ತಾರೆ ಎಂದರೆ ಸಾಕ್ಷಿ ಎಲ್ಲರೂ ಜೊತೆಯಲ್ಲೆ ಹಾಕಿರುತ್ತೇವೆ ಎಂದು ಹೇಳುತ್ತಾರೆ. ದಾವಾ 4 ನೇ ಆಸ್ತಿಸಣ್ಣ ಗಿರಿಯಪ್ಪನ ಸ್ವಯಾರ್ಜಿತವಾದ ಆಸ್ತಿ ಆಗಿದ್ದರಿಂದ, ನನಗೆ, ಉಳಿದ ವಾದಿಗಳಿಗೆ ಮತ್ತು 4 ರಿಂದ 15 ನೇ ಪ್ರತಿವಾದಿಗಳಿಗೆ ಯಾವುದೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಮ್ಮ ಹಿಸ್ಸೆಯ ಅನುಸಾರ 1 ರಿಂದ 3 ಮತ್ತು 5 ನೇ ಆಸ್ತಿಗಳಿಗೆ ಖಾತೆಯನ್ನು ಮಾಡಿಸಿಕೊಡುತ್ತೇವೆ ಎಂದು 2 ನೇ ಪ್ರತಿವಾದಿ ಹೇಳಿದ್ದ ಎಂದರೆ ಸರಿಯಲ್ಲ. ದಾವಾ 4 ನೇ ಆಸ್ತಿಯಲ್ಲಿ ನಮಗೂ ಭಾಗ ಬರಬೇಕು ಎಂದು ನಾವು ಕೇಳಿದ್ದರಿಂದ ನಮಗೂ ಅವರಿಗೂ ಗಲಾಟೆ ಆಗಿರುತ್ತದೆ ಎಂದರೆ ಸಾಕ್ಷಿ ಎಲ್ಲದರಲ್ಲೂ ಭಾಗ ಬರಬೇಕು ಎಂದುಹೇಳುತ್ತಾರೆ. ಗಲಾಟೆಯ ವಿಚಾರವಾಗಿ ಕ್ರಿಮಿನಲ್ ಪ್ರಕರಣ ಹೊಸದುರ್ಗದ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎನ್ನುವುದು ನಿಜ. ದಾವಾ 4 ನೇ ಆಸ್ತಿಯನ್ನು1 ರಿಂದ 3 ನೇ ಪ್ರತಿವಾದಿಗಳು ಅಭಿವೃದ್ದಿ ಪಡಿಸಿದ್ದರಿಂದ ಅದನ್ನು ಲಪಟಾಯಿಸುವ ಸಲುವಾಗಿ ಸುಳ್ಳು ಕೇಸನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ 1 ರಿಂದ 3 ಮತ್ತು 5 ನೇ ಆಸ್ತಿಯಲ್ಲಿ ನಮ್ಮ ಹಿಸ್ಸೆಯ ಅನುಸಾರ ಈಗಲೂ ಖಾತೆ ಮಾಡಿಸಿಕೊಡಲು 2 ನೇ ಪ್ರತಿವಾದಿ ತಯಾರಿ ಇರುತ್ತಾನೆ ಎಂದರೆ ಸಾಕ್ಷಿ ಎಲ್ಲದರಲ್ಲೂ ಮಾಡಿಸಿಕೊಡಬೇಕು ಎಂದು ಹೇಳುತ್ತಾರೆ. ನನ್ನ ಹೆಸರಿಗಿರುವ ಜಾನಕಲ್ ಗ್ರಾಮದ ಸರ್ವೆ ನಂ. 383/4 ರ ಜಮೀನನ್ನು ಈ ದಾವೆಯಲ್ಲಿ ಪ್ರತಿವಾದಿಗಳಿಗೆ ಭಾಗ ಕೊಡಬೇಕಾಗುತ್ತದೆ ಎನ್ನುವ ಕಾರಣ ಸೇರಿಸಿಲ್ಲ ಎಂದರೆ ಸಾಕ್ಷಿ ಅದು ನನ್ನ ಸ್ವಯಾರ್ಜಿತ ಆಸ್ತಿ ಎಂದು ಹೇಳುತ್ತಾರೆ. ನಾನು ಹಾಗೂ ಉಳಿದ ವಾದಿಗಳು ಮತ್ತು 4 ರಿಂದ 15 ನೇ ಪ್ರತಿವಾದಿಗಳು ಮಿಲಾಪೆಯಾಗಿ ದಾವಾ 4 ನೇ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಕೇಸನ್ನು ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 4 ರಿಂದ 9 ಮತ್ತು 11 ರಿಂದ 15 ನೇ ಪ್ರತಿವಾದಿಗಳ ಪರಃ 4 ರಿಂದ 9 ಮತ್ತು 11 ರಿಂದ 15 ನೇ ಪ್ರತಿವಾದಿಗಳು ಹಾಗೂ ಅವರ ಪರ ವಕೀಲರು ಗೈರು ಹಾಜರಿದ್ದು, ಹಾಗೂ ಲಿಖಿತ ಹೇಳಿಕೆಯನ್ನು ಸಲ್ಲಿಸದ ಕಾರಣ, ಏನು ಇಲ್ಲವೆಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.